

ಪೊಲೀಸ್: ಅಲ್ಲಪ್ಪಾ ಸೇಠ್‌ಜಿ, ನಿಮ್ಮನ್ನು ಕಳ್ಳರು ದೋಚುತ್ತಿದ್ದಾಗ ನೀವು ಸುಮ್ಮನಿದ್ದಿದ್ದೇಕೆ? ಕೊನೆಪಕ್ಷ ಸಹಾಯಕ್ಕಾಗಿ ಕೂಗಬಹುದಿತ್ತಲ್ಲ?

ಸೇಠ್‌ಜಿ: ನಾನು ಕೂಗುವುದಕ್ಕೆ ಬಾಯ್ತೆರೆದರೆ ನನ್ನ ನಾಲ್ಕು ಚಿನ್ನದ ಹಲ್ಲುಗಳು ಅವರ ಕಣ್ಣಿಗೆ ಬೀಳ್ತಿದ್ವು!

★★★

ಡಾಕ್ಟರ್: ನೀವೂ ನಿಮ್ಮ ಹೆಂಡತಿಯೂ ಒಂದೇ ಗುಂಪಿನ ರಕ್ತವನ್ನು ಹೊಂದಿದ್ದೀರಿ.

ಮಂಜ: ಅದರಲ್ಲಿ ಆಶ್ಚರ್ಯ ಪಡುವುದಕ್ಕೆ ಏನಿದೆ ಡಾಕ್ಟ್ರೇ, ಕಳೆದ ಹತ್ತು ವರ್ಷಗಳಿಂದಲೂ ಆಕೆ ನನ್ನ ರಕ್ತ ಹೀರ್‍ತಾ ಇದಾಳೆ!

★★★

ಗಿರಾಕಿ: ನೀವ್ಯಾಕೆ ಪ್ರತಿ ಸೋಮವಾರ ನಿಮ್ಮ ಹೋಟೆಲ್‌ಗೆ ರಜೆ ಮಾಡ್ತೀರಾ?

ಹೋಟೆಲ್ ಮಾಲೀಕ: ಪ್ರತಿ ಸೋಮವಾರ ತಟ್ಟೆ, ಲೋಟ, ಚಮಚ, ಪಾತ್ರೆಗಳನ್ನೆಲ್ಲಾ ತೊಳೀಬೇಕಲ್ಲಾ!

**(ಸಂ) ವಿ.ಹೇಮಂತ ಕುಮಾರ, ಬೆಂಗಳೂರು**

## ಏಪ್ರಿಲ್ ಫೂಲ್

ಏಪ್ರಿಲ್ 1 ರಂದು ಸಂತಾ ಬಸ್ಸಲ್ಲಿ ಪ್ರಯಾಣಿಸುತ್ತಿದ್ದಾಗ ನಿರ್ವಾಹಕ ಆತನ ಬಳಿ ಬಂದು 'ಟಿಕೆಟ್' ಎಂದ. ಕೂಡಲೇ 10 ರೂಪಾಯಿ ತೆತ್ತು ಟಿಕೆಟ್ ಖರೀದಿಸಿದ ಸಂತಾ, 'ಹೆ... ಹ್ಹೇ... ಏಪ್ರಿಲ್ ಫೂಲ್... ನನ್ನಲ್ಲಿ ಅದಾಗಲೇ ಪಾಸ್ ಇದೆ...' ಎಂದು ನಿರ್ವಾಹಕನನ್ನು ಗೇಲಿ ಮಾಡಲಾರಂಭಿಸಿದ!



★★★

## ಶಿಕ್ಷೆ

ಬಾಸ್: ಇಷ್ಟೊಂದು ಕಡಿಮೆ 'ವಸ್ತ್ರ ಧರಿಸಿ ಆಫೀಸಿಗೆ ಹಾಜರಾಗುವುದೆ? ದೇಹದ ಅರ್ಧದಷ್ಟು ಭಾಗ ಕಾಣಿಸುತ್ತಿದೆ...!

ತರುಣಿ: ನೀವು ನೀಡುವ ಸಂಬಳದಲ್ಲಿ ಇಷ್ಟೇ ಬರುವುದು ಸಾರ್.

ಬಾಸ್: ರೀ ಮ್ಯಾನೇಜರ್, ಇವಳಿಗೆ ಇನ್ನು ಮೂರು ತಿಂಗಳವರೆಗೆ ಪೂರ್ತಿ ಸಂಬಳ ಕೊಡ ಬೇಡಿ...!

★★★

## ಮುಜುಗರದ ಪರಮಾವಧಿ!

ಗೋಪಿ ತನ್ನ ಪತ್ನಿ ರತ್ನಾಳ ಜೊತೆ ಪಾರ್ಕ್‌ನಲ್ಲಿ ಕೂತಿದ್ದಾಗ ಒಬ್ಬಾಕೆ ವೈಯಾರಿ ಬಂದು ರತ್ನಾಳ ಕಿವಿಯಲ್ಲಿ ಉಸುರಿದಳು, 'ದುಡ್ಡು ಮೊದಲೇ ಇಸ್ಕೊಳ್ಳಿ. ಇಲ್ಲದಿದ್ರೆ ಈ ಆಸಾಮಿ ನಂತರ ತುಂಬಾ ತಕರಾರೆಬ್ಬಿಸಿ ಬಿಡ್ತಾನೆ!'

## ಏಟಿನ ಕಾರಣ?

ಜೀತೋ: ಒಂದು ಮಾತು ಹೇಳಲಿಕ್ಕಿತ್ತು; ಆದರೆ ದಯವಿಟ್ಟು ನೀವು ನನಗೆ ಹೊಡೆಯುವುದಿಲ್ಲ ತಾನೆ?

ಸಂತಾ: ಇಲ್ಲ, ಹೇಳು.

ಜೀತೋ: ನನಗೀಗ 3 ತಿಂಗಳು.

ಸಂತಾ: ಹೌದೆ, ಇದು ತುಂಬಾ ಶುಭ ಸಮಾಚಾರ, ಇದಕ್ಕೆ ನಾನ್ಯಾಕೆ ಹೊಡೆಯಲಿ?!


ಜೀತೋ: ಮದುವೆಗೆ ಮುಂಚೆ ಇದೇ ಮಾತನ್ನು ಅಪ್ಪನಿಗೆ ಅರುಹಿದ್ದಾಗ ತುಂಬಾ ಏಟು ಬಿದ್ದಿತ್ತು..!

★★★

## ಅಮ್ಮಾವ್ರ ಗಂಡ

ಮಗ: ನಾನು ಅಮ್ಮನ ಅನುಮತಿಯಿಲ್ಲದೆ ಹೊರಗೆ ಹೋಗುವಷ್ಟು ದೊಡ್ಡವನಾಗುವುದು ಯಾವಾಗಪ್ಪಾ?

ಅಪ್ಪ: ನಿನ್ನ ವಿಷಯ ಹಾಗಿರಲಿ, ನಾನು ಕೂಡಾ ಈ ತನಕ ಅಷ್ಟು ದೊಡ್ಡವನಾಗಿಲ್ಲ ಕಣೋ!



★★★

## ಸೂಚನೆ

ಗೋಪಿ: ಹಲೋ... ವಿದ್ಯುತ್ ಇಲಾಖೆನಾ...? ಕರೆಂಟ್ ಯಾವಾಗ ಬರುತ್ತದೆ?

ಅತ್ತ ಕಡೆಯ ಧ್ವನಿ: ಲೈಟ್ ಗುಂಡಿ ಅದುಮಿಟ್ಟು ಬಿಡಿ... ಕರೆಂಟ್ ಬಂದ ಕೂಡಲೇ ತಿಳಿಯುತ್ತದೆ...!

**(ಸಂ) ರಮಣ್‌ಶೆಟ್ಟಿ ರೆಂಜಾಳ್**